# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 17 |
| ಸದಸ್ಯರ ಹೆಸರು | : | ಶ್ರೀ ಶರವಣ .ಟಿ.ಎ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನಷ್ಟದಲ್ಲಿ ಇರುವ ಸಾರ್ವಜನಿಕ ಉದ್ಯಮಗಳು ಯಾವುವು; ಸದರಿ ಉದ್ಯಮಗಳಿಗೆ ಉಂಟಾಗಿರುವ ನಷ್ಟದ ಮೊತ್ತವೆಷ್ಟು; (ವಿವರ ನೀಡುವುದು) | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಸಣ್ಣ ಪ್ರಮಾಣದ ಕೈಗಾರಿಕೆ ವ್ಯಾಪ್ತಿಯಡಿ ಬರುವ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತವು ನಷ್ಟದಲ್ಲಿದ್ದು, 2022-23ನೇ ಸಾಲಿನ ಅಂತ್ಯಕ್ಕೆ ಕ್ರೋಢೀಕೃತ ನಷ್ಟ ರೂ.434.91 ಲಕ್ಷಗಳು. |
| ಆ) | ಯಾವ ಯಾವ ಸಾರ್ವಜನಿಕ ಉದ್ಯಮಗಳಿಂದ ಎಷ್ಟು ನಷ್ಟ ಉಂಟಾಗಿದೆ; (ವಿವರ ನೀಡುವುದು) | |
| ಇ) | ಈ ನಷ್ಟಕ್ಕೆ ಕಾರಣಗಳನ್ನು ಪತ್ತೆ ಹಚ್ಚಿ ಸದರಿ ಉದ್ಯಮಗಳನ್ನು ಲಾಭದಾಯಕ ಉದ್ಯಮಗಳನ್ನು ಪರಿವರ್ತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುದು; | ನಷ್ಟದಲ್ಲಿರುವ ಉದ್ಯಮಗಳ ವ್ಯಾಪಾರ ವಹಿವಾಟುಗಳನ್ನು ವೃದ್ಧಿಸಿ ಲಾಭದೆಡೆಗೆ ಕೊಂಡೊಯ್ಯಲು ಕೆಳಕಂಡಂತೆ ಕ್ರಮ ವಹಿಸಲಾಗುತ್ತಿದೆ:<br>1) ಇ-ಮಾರುಕಟ್ಟೆ ಅವಕಾಶ ಕಲ್ಪಿಸುವುದು.<br>2) ಉತ್ಪನ್ನಗಳನ್ನು ಆನ್ ಲೈನ್ ಮೂಲಕ ಮಾರಾಟ ಮಾಡಲು ಫ್ಲಿಪ್ ಕಾರ್ಟ್, ವೃದ್ಧಿ, ಎಂ.ಎಸ್.ಎಂ.ಇ. ಸಮರ್ಥ್, ಆನ್ ಲೈನ್ ವೇದಿಕೆಗಳೊಂದಿಗೆ MoU ಒಡಂಬಡಿಕೆ.<br>3) ರಫ್ತು ಮಾರುಕಟ್ಟೆಯಲ್ಲಿರುವ ಅವಕಾಶಗಳ ಬಳಕೆ<br>4) 2023-24ನೇ ಸಾಲಿಗೆ ರಾಜ್ಯದ ಸಂಗ್ರಹಣಾ ಪ್ರಾಧಿಕಾರಗಳು ಅವಶ್ಯಕ ತೆಂಗಿನ ನಾರಿನ ಉತ್ಪನ್ನಗಳನ್ನು ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತವು ಏಕರೂಪವಾಗಿ ಗರಿಷ್ಟ ರೂ.25.00 ಲಕ್ಷಗಳ ವೆಚ್ಚದಲ್ಲಿ ನೇರವಾಗಿ ಸಂಗ್ರಹಣೆ ಮಾಡಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಆರ್ಥಿಕ ಇಲಾಖೆಯು ವಿನಾಯಿತಿ ನೀಡಿರುತ್ತದೆ. |
| ಈ) | ಸತತ ನಷ್ಟದಲ್ಲಿರುವ ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಣ ಮಾಡುವ, ಖಾಸಗಿಯವರಿಗೆ ಪರಭಾರೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಅಂತಹ ಸಂಸ್ಥೆಗಳು ಯಾವುವು; (ಸಂಪೂರ್ಣ ವಿವರ ನೀಡುವುದು | ಖಾಸಗೀಕರಣ / ಖಾಸಗಿಯವರಿಗೆ ಪರಭಾರೆ ಮಾಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

| | | |
|---|---|---|
| ಉ) | ಈಗಾಗಲೇ ಮುಚ್ಚಲ್ಪಟ್ಟ ಸಾರ್ವಜನಿಕ ಉದ್ಯಮಗಳು ಯಾವುವು; ಎಷ್ಟು ಪ್ರಮಾಣದ ಭೂಮಿಯನ್ನು ಯಾವ ದರಕ್ಕೆ ಯಾವ ವ್ಯಕ್ತಿ / ಸಂಸ್ಥೆಗಳಿಗೆ ಖಾಸಗಿಯವರಿಗೆ ಪರಭಾರೆ / ಮಾರಾಟ ಮಾಡಲಾಗಿದೆ ಎಂಬ ಬಗ್ಗೆ ಸಂಪೂರ್ಣ ವಿವರಗಳನ್ನು ನೀಡುವುದು? | ಅನ್ವಯಿಸುವುದಿಲ್ಲ |

ಸಿಐ 48 ಸಿಎಸ್‌ಸಿ 2024